**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ವಿಷಯ:** ಉತ್ತರ ಕರ್ನಾಟಕದ ಬೆಳಗಾವಿಯಿಂದ ಬಳ್ಳಾರಿವರೆಗೆ ಹಾಗೂ ಹಾವೇರಿಯಿಂದ ಬೀದರ್ ವರೆಗಿನ ಮೈಚಾಚಿರುವ ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕದ 13 ಜಿಲ್ಲೆಗಳ ಬಹುತೇಕ ತಾಲ್ಲೂಕುಗಳು ಮಳೆಯಾಶ್ರಿತ, ಮಳೆಯಾದರೆ ಬೆಳೆ, ಇಲ್ಲವೇ ಗುಳೆ ಎನ್ನುವಂತಾಗಿರುವ ಬಗ್ಗೆ, ದಿನಾಂಕ:08.12.2025ರ ಹೊಸದಿಗಂತ ಪತ್ರಿಕೆಯಲ್ಲಿ 'ಉತ್ತರ ಕರ್ನಾಟಕದ ಜನರ ಗುಳೆಗೆ ಶಾಶ್ವತ ಪರಿಹಾರ ಸಿಗುತ್ತಾ' ಎಂಬ ಬಗ್ಗೆ ವರದಿ ಪ್ರಕಟವಾಗಿರುತ್ತದೆ.

ಜಲಜೀವನ ಮಿಷನ್, ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಜಾರಿಗೆ ಬಂದಿದ್ದರೂ ಬಹುತೇಕ ಅವು ಕೊಳವೆ ಬಾವಿಗಳನ್ನು ಅವಲಂಬಿಸಿವೆ. ಬೇಸಿಗೆಯಲ್ಲಿ ಬೋರ್ ವೆಲ್‌ಗಳು ಬತ್ತಿ ಹೋಗುವುದರಿಂದ ಬೀದರ್, ಕಲಬುರಗಿ, ರಾಯಚೂರು ಹಾಗೂ ಬಳ್ಳಾರಿ, ವಿಜಯನಗರ, ಕೊಪ್ಪಳ ಜಿಲ್ಲೆಗಳ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುತ್ತದೆ. ಈ ವೇಳೆ ತಕ್ಷಣಕ್ಕೆ ಆಯಾ ಜಿಲ್ಲಾಡಳಿತಗಳು ತಾತ್ಕಾಲಿಕವಾಗಿ ಕುಡಿಯುವ ನೀರು ಪೂರೈಕೆಗೆ ಕ್ರಮ ಕೈಗೊಳ್ಳದಿದ್ದರೆ, ನದಿ, ಕೆರೆ ಪಾತ್ರದ ಕೆಲ ಗ್ರಾಮೀಣ ಜನರು ಒರತೆಯಿಂದ ಬಿಂದಿಗೆ ತುಂಬಿಕೊಂಡರೆ, ಇನ್ನುಳಿದಂತೆ ಕಿ.ಮೀ.ಗಟ್ಟಲೆ ಸೈಕಲ್‌ಗಳ ಮೇಲೆ ಇಲ್ಲವೇ ತಲೆ ಮೇಲೆ ಹೊತ್ತು ತಂದು ದಾಹ ತೀರಿಸಿಕೊಳ್ಳುವುದನ್ನು ಮನಗಾಣಬಹುದಾಗಿದೆ.

ಈ ಭಾಗದ ಪ್ರಮುಖ ನೀರಾವರಿ ಬೇಡಿಕೆಗಳಾದ ಕೃಷ್ಣಾ ಮೇಲ್ದಂಡೆ ಯೋಜನೆ ದಶಕಗಳಿಂದ ಕನಸಾಗಿಯೇ ಉಳಿದಿದೆ. ಸಾಲಗುಂದ ಯೋಜನೆ, ಸಿಂಗಟಾಲೂರು ಏತ ನೀರಾವರಿ ಯೋಜನೆ ಅಸಮರ್ಪಕವಾಗಿದ್ದರೆ, ತುಂಗಭದ್ರಾ ಡ್ಯಾಂನಲ್ಲಿ ಹೂಳು ತುಂಬಿರುವುದರಿಂದ ನವಿಲೆ ಸಮಾನಾಂತರ ಜಲಾಶಯ ನಿರ್ಮಿಸಬೇಕಿದೆ. ತುಂಗಭದ್ರಾ ಜಲಾಶಯದಲ್ಲಿ ಗರಿಷ್ಠ ನೀರು ತುಂಬಿ ಹರಿಯುವ ಸಂದರ್ಭದಲ್ಲಿ ವಿಜಯನಗರ, ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಕೈಗೊಳ್ಳಬೇಕು. 'ಕೃಷ್ಣಾ ನದಿ, ಭೀಮಾ ನದಿ ಹಾಗೂ ಕಾಗಿಣ ನದಿ ಹರಿಯುವ ಬಾಗಲಕೋಟೆ, ರಾಯಚೂರು ಜಿಲ್ಲೆಗಳ ಕೆರೆಗಳ ಒಡಲು ತುಂಬಿಸುವ ಶಾಶ್ವತ ಕೆಲಸಗಳಾದರೆ ಈ ಭಾಗದ ನೀರಿನ ಬರ ತಗ್ಗಬಹುದಾಗಿದ್ದು, ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಜಲ ಸಂಪನ್ಮೂಲ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

*****

**ಜಲಸಂಪನ್ಮೂಲ ಇಲಾಖೆಯ ಉತ್ತರ:**

1. **ಕೃಷ್ಣಾ ಮೇಲ್ದಂಡೆ ಯೋಜನೆ:**

ಕೃಷ್ಣಾ ಕಣಿವೆ ಪಾತ್ರದಲ್ಲಿಯ ಉತ್ತರ ಕರ್ನಾಟಕದ ಪ್ರತಿಷ್ಠಿತ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1 ಮತ್ತು 2 ರ ಯೋಜನೆಯನ್ನು ಈಗಾಗಲೇ ಅನುಷ್ಠಾನಗೊಳಿಸಿ, 6.20 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಇದಲ್ಲದೇ, ಸದರಿ ಯೋಜನೆಯಡಿ ಎಲ್ಲಾ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಮಗಾರಿಗಳು ಸಹ ಪೂರ್ಣಗೊಳಿಸಲಾಗಿರುತ್ತದೆ.

ಕೃಷ್ಣಾ ನ್ಯಾಯಧೀಕರಣ-2 ರ ತೀರ್ಪಿನನ್ವಯ ರಾಜ್ಯಕ್ಕೆ ಹಂಚಿಕೆಯಾದ ಒಟ್ಟು 173 ಟಿ.ಎಂ.ಸಿ ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ ಅನುಷ್ಠಾನಕ್ಕಾಗಿ 130 ಟಿ.ಎಂ.ಸಿ ಹಂಚಿಕೆಯಾಗಿರುತ್ತದೆ. ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟ ಆರ್.ಎಲ್ 519.60 ಮೀಟರ್‌ನಿಂದ 524.256 ಮೀಟರ್‌ವರೆಗೆ (15 ಅಡಿ) ಎತ್ತರಿಸುವುದರಿಂದ ಹೆಚ್ಚುವರಿಯಾಗಿ 100 ಟಿ.ಎಂ.ಸಿ ನೀರು ಸಂಗ್ರಹಣೆಯಾಗಲಿದೆ.

ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟೆ, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಗದಗ ಜಿಲ್ಲೆಗಳಡಿ ಹೆಚ್ಚುವರಿಯಾಗಿ ಹಂತ-3ರಡಿ ಒಟ್ಟು 5.94 ಲಕ್ಷ ಹೆಕ್ಟೇರ್ (14.68 ಲಕ್ಷ ಎಕರೆ) ಅಚ್ಚುಕಟ್ಟು ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವುದಾಗಿದ್ದು, ಈ ಪೈಕಿ ಈಗಾಗಲೇ 1.50 ಲಕ್ಷ ಹೆಕ್ಟೇರ್ outlet potential ಸೃಜಿಸಲಾಗಿರುತ್ತದೆ. ಸದರಿ ಯೋಜನೆಯಡಿಯ 9 ಉಪಯೋಜನೆ ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿರುತ್ತವೆ.

ಇದಲ್ಲದೆ, ಕೃಮೇಯೋ ಹಂತ-3ರಡಿ ಆಲಮಟ್ಟಿ ಜಲಾಶಯದ ಸಂಗ್ರಹಣೆ ಮಟ್ಟ 519.60 ಮೀ ನಿಂದ 524.256 ಮೀ ವರೆಗೆ ಎತ್ತರಿಸುವುದರಿಂದ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದಲಿರುವ 188 ಗ್ರಾಮಗಳ ಸುಮಾರು 75,000 ಎಕರೆ ಜಮೀನು, ಮುಳುಗಡೆ ಹೊಂದಲಿರುವ 20 ಗ್ರಾಮಗಳ & ಬಾಗಲಕೋಟೆ ಪಟ್ಟಣದ ಭಾಗಶಃ ಪುನರ್‌ವಸತಿಗಾಗಿ ಸುಮಾರು 6,400 ಎಕರೆ ಹಾಗೂ ಯೋಜನೆಯಡಿಯ ಕಾಲುವೆಗಳ ಜಾಲಗಳ ನಿರ್ಮಾಣಕ್ಕಾಗಿ ಸುಮಾರು 51,000 ಎಕರೆ, ಒಟ್ಟಾರೆ 1.34 ಲಕ್ಷ ಎಕರೆ ಜಮೀನು 2013ರ ಹೊಸ ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳುವುದಾಗಿರುತ್ತದೆ. ಈ ಪೈಕಿ ಇಲ್ಲಿಯವರೆಗೆ 29,566 ಎಕರೆ ಕ್ಷೇತ್ರವನ್ನು ಭೂಸ್ವಾಧೀನ ಪಡಿಸಿಕೊಂಡಿದ್ದು, ಬಾಕಿ ಉಳಿದ ಕ್ಷೇತ್ರವು ಭೂಸ್ವಾಧೀನ ಪ್ರಕ್ರಿಯೆಯ ವಿವಿಧ ಹಂತದಲ್ಲಿರುತ್ತದೆ.

ಪ್ರಸ್ತುತ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರಡಿ ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳಿಗೆ ಹೆಚ್ಚುವರಿ ಭೂಪರಿಹಾರ ಕೋರಿ ಯೋಜನಾ ಪ್ರದೇಶದ ರೈತರು ಮತ್ತು ಜನಪ್ರತಿನಿಧಿಗಳು ಆಗ್ರಹಿಸುತ್ತಿರುವ ಹಿನ್ನೆಲೆಯಲ್ಲಿ, ದಿನಾಂಕ:16.09.2025ರಂದು ಭೂಸ್ವಾಧೀನ ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷ ಸಚಿವ ಸಂಪುಟದ ಸಭೆ ಜರುಗಿಸಲಾಗಿರುತ್ತದೆ. ಸಚಿವ ಸಂಪುಟದ ನಿರ್ಣಯಗಳನ್ವಯ ಸರ್ಕಾರದ ಆದೇಶ ದಿನಾಂಕ:09.10.2025ರಲ್ಲಿ ಈ ಕೆಳಗಿನಂತೆ ಅನುಮೋದನೆ ನೀಡಲಾಗಿರುತ್ತದೆ:

- ಮುಳುಗಡೆ ಹೊಂದಲಿರುವ ಜಮೀನುಗಳನ್ನು ಒಂದೇ ಹಂತದಲ್ಲಿ ಒಪ್ಪಂದದ ದರ ಅಥವಾ ಭೂ ಖರೀದಿ ಮುಖಾಂತರ ಭೂಸ್ವಾಧೀನ ಮಾಡುವುದು.
- ಮುಳುಗಡೆ ಜಮೀನಿಗೆ ಎಕರೆಗೆ (a) ಖುಷ್ಕಿ ಭೂಮಿಗೆ (Dry land) ರೂ.30.00 ಲಕ್ಷ (b) ತರಿ ಭೂಮಿಗೆ (Wet land) ರೂ.40.00 ಲಕ್ಷ ಮತ್ತು ಕಾಲುವೆ ಜಮೀನುಗಳ ಎಕರೆಗೆ(a) ಖುಷ್ಕಿ ಭೂಮಿಗೆ (Dry land) ರೂ.25.00 ಲಕ್ಷ ಮತ್ತು (b)ತರಿ ಭೂಮಿಗೆ (Wet land) ರೂ.30.00ಲಕ್ಷ ಒಪ್ಪಂದದ ಐತೀರ್ಪು ದರಗಳನ್ನು ನಿಗಧಿಪಡಿಸಿ ಆದೇಶಿಸಿರುತ್ತದೆ.
- ಲೋಕ ಅದಾಲತ್ ಮತ್ತು Mediation ಮೂಲಕ ನ್ಯಾಯಲಯದ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ನ್ಯಾಯಾಲಯದಲ್ಲಿ ಸೂಕ್ತ ಕ್ರಮ ವಹಿಸುವುದು.
- ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬದಲಾಗಿ ರಾಜ್ಯ ನೀತಿಯನ್ನು ರೂಪಿಸಲು ಕ್ರಮ ವಹಿಸುವುದಾಗಿರುತ್ತದೆ.
- ಹೊಸ ಭೂಸ್ವಾಧೀನ 2013 ರ ಕಾಯಿದೆಯನ್ವಯ Land Acquisition, R&R Authority ರಚಿಸಲು ಮತ್ತು ಇದಕ್ಕಾಗಿ ಅಧಿಕಾರಿಯನ್ನು ನೇಮಿಸಲು ಕ್ರಮ ವಹಿಸುವುದು.
- ಹಂತ-3 ರ ಯೋಜನೆಯಡಿಯ ಭೂಸ್ವಾಧೀನ, ಪು&ಪು ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಸುಮಾರು ರೂ.75,000 ಕೋಟಿ ಮೊತ್ತವನ್ನು ಮುಂದಿನ 4 ವರ್ಷಗಳಲ್ಲಿ ಭರಿಸಲು ಸುಮಾರು ರೂ.18,000 ಕೋಟಿ ಮೊತ್ತವನ್ನು ಪ್ರತಿ ವರ್ಷಕ್ಕೆ ಅನುದಾನವನ್ನು ಜಲ ಸಂಪನ್ಮೂಲ ಇಲಾಖೆಗೆ ಆಯ-ವ್ಯಯದಲ್ಲಿ ಕಲ್ಪಿಸುವುದು.

ಸದರಿ ಆದೇಶದಂತೆ ಪ್ರಸ್ತುತ ಯೋಜನಾ ಪ್ರದೇಶದಲ್ಲಿಯ ಭೂಸ್ವಾಧಿನತೆಗೆ ನಿಗದಿಪಡಿಸಲಾದ ಒಪ್ಪಂದದ ದರಗಳನ್ವಯ ಭೂಸ್ವಾಧಿನ ಪ್ರಕ್ರಿಯೆಗೆ ಕ್ರಮ ವಹಿಸಲಾಗುತ್ತಿದೆ. ಈ ಯೋಜನೆಗೆ ಇದೂವರೆಗೆ ರೂ.21,380 ಕೋಟಿ ವೆಚ್ಚ ಮಾಡಲಾಗಿರುತ್ತದೆ (ಭೂಸ್ವಾಧೀನ, R & R ವೆಚ್ಚ ಒಳಗೊಂಡು).

ಕೃಷ್ಣಾ ನ್ಯಾಯಾಧಿಕರಣ-2 ರ ಅಂತಿಮ ತೀರ್ಪು ಇನ್ನೂ ಕೇಂದ್ರ ಸರ್ಕಾರದಿಂದ ಗೆಜೆಟ್ ಅಧಿಸೂಚನೆ ಆಗಿರುವುದಿಲ್ಲ. ಈ ಸಂಬಂಧ, ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶೀಘ್ರ ಗೆಜೆಟ್ ಅಧಿಸೂಚನೆ ಹೊರಡಿಸುವಂತೆ ಆಗ್ರಹಿಸುವ ನಿಟ್ಟಿನಲ್ಲಿ ಕಾನೂನಾತ್ಮಕ ಸೇರಿದಂತೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

## 2. ಸಾಲಗುಂದ ಯೋಜನೆ:

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸಾಲಗುಂದ ಗ್ರಾಮದ ಹತ್ತಿರ ತುಂಗಭದ್ರಾ ನದಿಯಿಂದ ನೀರನ್ನೆತ್ತಿ ತುಂಗಭದ್ರಾ ಎಡದಂಡೆ ಕಾಲುವೆಯ D-32 ಮತ್ತು D-36 ವ್ಯಾಪ್ತಿಯ ಬಾಧಿತ 7237 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಕಲ್ಪಿಸುವ ಸಾಲಗುಂದ ಏತ ನೀರಾವರಿ ಯೋಜನೆ ನಿರ್ಮಾಣ ಕಾಮಗಾರಿಯ ರೂ.178.00 ಕೋಟಿ ಮೊತ್ತದ ಯೋಜನೆಗೆ ಸರ್ಕಾರದ ದಿನಾಂಕ:05.08.2025 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿ, ಯೋಜನೆಯನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುವುದು.

**3. ಸಿಂಗಟಾಲೂರು ಏತ ನೀರಾವರಿ ಯೋಜನೆ:**

ಸಿಂಗಟಾಲೂರು ಏತ ನೀರಾವರಿ ಯೋಜನೆಗೆ ತುಂಗಭದ್ರಾ ನದಿಗೆ ಅಡ್ಡಲಾಗಿ ಮುಂಡರಗಿ ತಾಲೂಕು ಹಮ್ಮಿಗಿ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಿಸಿ 16.00 ಟಿ.ಎಂ.ಸಿ ನೀರನ್ನು ಉಪಯೋಗಿಸಿಕೊಂಡು ಸುಮಾರು 2,65,229 ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸುವ ಉದ್ದೇಶ ಹೊಂದಿರುತ್ತದೆ. ಈ ಯೋಜನೆಯಡಿ ಇದುವರೆಗೆ 28,988 ಹೆಕ್ಟೇರ್ ಪ್ರದೇಶಕ್ಕೆ Flow & Drip ಪದ್ಧತಿಯಲ್ಲಿ ನೀರಾವರಿ ಸೌಲಭ್ಯ ಸೃಜಿಸಲಾಗಿದೆ.

ಪ್ರಸ್ತುತ ಈ ಯೋಜನೆಯಡಿ 71,074 ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಸೌಲಭ್ಯ ಕಲ್ಪಿಸುವ 5 ಪ್ಯಾಕೇಜ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಬಾಕಿ ಉಳಿದ 16,719 ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗೆ ಟೆಂಡರ್ ಕರೆಯಬೇಕಾಗಿರುತ್ತದೆ.

ಈ ಯೋಜನೆಗೆ ಪ್ರಾರಂಭದಿಂದ ಇದುವರೆಗೂ ರೂ.4268.61 ಕೋಟಿಗಳ ವೆಚ್ಚ ಮಾಡಲಾಗಿರುತ್ತದೆ. ಯೋಜನೆಯ ಬಾಕಿ ಕಾಮಗಾರಿಗಳಿಗೆ ತೀವ್ರ ಚಾಲನೆ ನೀಡಿ ಆದ್ಯತೆ ಮೇರೆಗೆ ಯೋಜನೆ ಪೂರ್ಣಗೊಳಿಸಿ, ಯೋಜಿತ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಸರ್ಕಾರ ಬದ್ಧವಾಗಿದೆ.

**4. ನವಲಿ ಸಮನಾಂತರ ಜಲಾಶಯ**

ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದಾಗಿ ಉಂಟಾಗಿರುವ ಸುಮಾರು 25 ಟಿಎಂಸಿ ನೀರಿನ ಸಂಗ್ರಹಣೆಯಲ್ಲಿನ ಕೊರತೆಯನ್ನು ನೀಗಿಸಲು ಪರ್ಯಾಯವಾಗಿ ಕೊಪ್ಪಳ ಜಿಲ್ಲೆಯ ನವಲಿ ಗ್ರಾಮದ ಹತ್ತಿರ ಸಮತೋಲನಾ ಜಲಾಶಯ ನಿರ್ಮಿಸುವ ಪ್ರಸ್ತಾವನೆಯ ರೂ.15601 ಕೋಟಿ ಮೊತ್ತದ ಯೋಜನಾ ವರದಿಯನ್ನು ಸಿದ್ಧಪಡಿಸಲಾಗಿದೆ. ತುಂಗಭದ್ರಾ ಯೋಜನೆಯು ಅಂತರ ರಾಜ್ಯ ಯೋಜನೆಯಾಗಿರುವ ಪ್ರಯುಕ್ತ, ನವಲಿ ಸಮಾನಾಂತರ ಜಲಾಶಯ ಯೋಜನೆಗೆ ತುಂಗಭದ್ರಾ ಮಂಡಳಿ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಸಹಮತಿ ಪಡೆಯಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

**5. ಕೆರೆ ತುಂಬಿಸುವ ಯೋಜನೆಗಳು:**

ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿನ ಕರ್ನಾಟಕ ನೀರಾವರಿ ನಿಗಮ ಹಾಗೂ ಕೃಷ್ಣಾ ಭಾಗ್ಯ ಜಲ ನಿಗಮಗಳ ವ್ಯಾಪ್ತಿಯಲ್ಲಿ ಬರುವ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದ 13 ಜಿಲ್ಲೆಗಳಲ್ಲಿ ಒಟ್ಟು 50 ಕೆರೆ ತುಂಬಿಸುವ ಯೋಜನೆಗಳನ್ನು ಈಗಾಗಲೇ ಅನುಷ್ಠಾನಗೊಳಿಸಿ, 1002 ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ.

ಮುಂದುವರೆದು, ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದ 13 ಜಿಲ್ಲೆಗಳಲ್ಲಿ 35 ಕೆರೆ ತುಂಬಿಸುವ ಯೋಜನೆಗಳು ಪ್ರಗತಿಯಲ್ಲಿದ್ದು, ಇವುಗಳಡಿ ಒಟ್ಟು 1084 ಕೆರೆಗಳನ್ನು ತುಂಬಿಸಲಾಗುತ್ತದೆ. ಸದರಿ ಯೋಜನೆಗಳಡಿ ಇರುವ ಬಾಕಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಿ, ಕೆರೆಗಳನ್ನು ತುಂಬಿಸಲಾಗುವುದು.

ಈ ಎಲ್ಲಾ ಕೆರೆ ತುಂಬುವ ಯೋಜನೆಗಳ ಅನುಷ್ಠಾನದಿಂದ ಕುಡಿಯುವ ನೀರು ಪೂರೈಕೆ ಹಾಗೂ ಅಂತರ್ಜಲ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

**ಒಟ್ಟಾರೆ, ಜಲ ಸಂಪನ್ಮೂಲ ಇಲಾಖೆಯ ವತಿಯಿಂದ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದ 13 ಜಿಲ್ಲೆಗಳಲ್ಲಿ ನೀರಾವರಿ ಯೋಜನೆಗಳು, ಕೆರೆ ತುಂಬಿಸುವ ಯೋಜನೆಗಳು, ಆಧುನೀಕರಣ ಯೋಜನೆಗಳು, ನೀರಿನ ಬಳಕೆಯಲ್ಲಿನ ಸಾಮರ್ಥ್ಯದ ಹೆಚ್ಚಳಕ್ಕೆ ನವೀನ ತಂತ್ರಜ್ಞಾನ ಅಳವಡಿಕೆ ಯೋಜನೆಗಳು, ಕಾಲುವೆ/ಅಣೆಕಟ್ಟುಗಳ ಪುನಶ್ಚೇತನ ಯೋಜನೆಗಳ ಅನುಷ್ಠಾನದ ಜೊತೆಗೆ ಸಮರ್ಪಕ ನೀರಿನ ನಿರ್ವಹಣೆಗೆ ಆದ್ಯತೆ ನೀಡಲು ಮತ್ತು ಅಗತ್ಯ ಅನುದಾನವನ್ನು ಕಲ್ಪಿಸುವುದರೊಂದಿಗೆ ಯೋಜನೆಗಳ ತೀವ್ರ ಅನುಷ್ಠಾನಕ್ಕೆ ಸರ್ಕಾರ ಬದ್ಧವಾಗಿದೆ.**

## ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಯ ಯೋಜನಾ ಕಾಮಗಾರಿಗಳ ವಿವರಗಳು:

ಉತ್ತರ ಕರ್ನಾಟಕದ ಭಾಗದಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದಲೂ ಪ್ರಮುಖವಾಗಿ ನೀರಾವರಿ / ಜಿನುಗು ಕೆರೆಗಳು, ಅಣೆಕಟ್ಟು, ಪಿಕಪ್, ಬಾಂದಾರ, ಬ್ರಿಡ್ಜ್ ಕಂ ಬ್ಯಾರೇಜ್, ಚೆಕ್ ಡ್ಯಾಂ, ಕಿಂಡಿ ಅಣೆಕಟ್ಟು, ಕೊಳವೆ ಬಾವಿ, ಕ್ಷಾರಭೂಮಿ ಯೋಜನೆಗಳು, ಏತ ನೀರಾವರಿ ಯೋಜನೆಗಳು, ಕೆರೆ ತುಂಬಿಸುವ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿವೆ:

**1. ಕೆರೆಗಳು, ಅಣೆಕಟ್ಟು, ಪಿಕಪ್, ಬಾಂದಾರ, ಬ್ರಿಡ್ಜ್ ಕಂ ಬ್ಯಾರೇಜ್ ಮತ್ತು ಏತ ನೀರಾವರಿ ಯೋಜನೆಗಳು:**

| ಕ್ರ. ಸಂ. | ಜಿಲ್ಲೆ | ಕೆರೆಗಳು | | ಅಣೆಕಟ್ಟು/ಪಿಕಪ್/ ಬಾಂದಾರ/ ಬ್ಯಾರೇಜ್/ಬಿ.ಸಿ.ಬಿ | | ಏತ ನೀರಾವರಿ ಯೋಜನೆಗಳು | | ಒಟ್ಟು ಯೋಜನೆಗಳು | |
|---|---|---|---|---|---|---|---|---|---|
| | | ಸಂಖ್ಯೆ | ಅಚ್ಚುಕಟ್ಟು | ಸಂಖ್ಯೆ | ಅಚ್ಚುಕಟ್ಟು | ಸಂಖ್ಯೆ | ಅಚ್ಚುಕಟ್ಟು | ಸಂಖ್ಯೆ | ಅಚ್ಚುಕಟ್ಟು |
| 1 | ಬಳ್ಳಾರಿ | 36 | 3417 | 144 | 6304 | 25 | 3542 | 205 | 13264 |
| 2 | ವಿಜಯನಗರ | 87 | 13455 | 254 | 9542 | 42 | 11851 | 383 | 34847 |
| 3 | ಬೀದರ | 125 | 21494 | 230 | 15091 | 12 | 3551 | 367 | 40136 |
| 4 | ಕಲಬುರಗಿ | 169 | 29014 | 383 | 41834 | 2 | 364 | 554 | 71212 |
| 5 | ಯಾದಗಿರಿ | 71 | 6549 | 121 | 12444 | 13 | 3184 | 205 | 22177 |
| 6 | ರಾಯಚೂರು | 72 | 8706 | 82 | 5604 | 13 | 4747 | 167 | 19057 |
| 7 | ಕೊಪ್ಪಳ | 122 | 15844 | 191 | 11773 | 19 | 5794 | 332 | 33411 |
| 8 | ಬೆಳಗಾವಿ | 291 | 30916 | 632 | 52291 | 53 | 12190 | 976 | 95398 |
| 9 | ವಿಜಯಪುರ | 160 | 23529 | 302 | 24619 | 2 | 1983 | 464 | 50131 |
| 10 | ಬಾಗಲಕೋಟೆ | 71 | 10845 | 243 | 18429 | 18 | 6731 | 332 | 36005 |
| 11 | ಧಾರವಾಡ | 114 | 14316 | 252 | 13710 | 4 | 364 | 370 | 28390 |
| 12 | ಗದಗ | 32 | 7741 | 336 | 14112 | 2 | 850 | 370 | 22703 |
| 13 | ಹಾವೇರಿ | 264 | 23427 | 219 | 11035 | 23 | 2640 | 506 | 37102 |
| 14 | ಉತ್ತರ ಕನ್ನಡ | 91 | 13755 | 643 | 35285 | 51 | 4648 | 785 | 53688 |
| | ಒಟ್ಟು | **1705** | **223008** | **4032** | **272074** | **279** | **62439** | **6016** | **557521** |

**2. ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳು:**

- **ಪೂರ್ಣಗೊಳಿಸಿದ ಯೋಜನೆಗಳು:**

| ಕ್ರ. ಸಂ. | ಜಿಲ್ಲೆ | ಯೋಜನೆಗಳ ಸಂಖ್ಯೆ | ತುಂಬಿಸಲಾಗುವ ಸಣ್ಣ ನೀರಾವರಿ ಇಲಾಖೆಯ ಕೆರಗಳ ಸಂಖ್ಯೆ |
|---|---|---|---|
| 1 | ಬೆಳಗಾವಿ | 10 | 12 |
| 2 | ಧಾರವಾಡ | 2 | 2 |
| 3 | ಗದಗ | 2 | 2 |
| 4 | ಹಾವೇರಿ | 14 | 19 |
| 5 | ವಿಜಯಪುರ | 1 | 1 |
| 6 | ಬಾಗಲಕೋಟೆ | 5 | 5 |
| **ಕಿತ್ತೂರು ಕರ್ನಾಟಕದ ಒಟ್ಟು** | | **34** | **41** |
| 1 | ಯಾದಗಿರಿ | 1 | 2 |
| 2 | ವಿಜಯನಗರ | 2 | 2 |
| 2 | ಕೊಪ್ಪಳ | 1 | 8 |
| **ಕಲ್ಯಾಣ ಕರ್ನಾಟಕದ ಒಟ್ಟು** | | **4** | **12** |

• ಪ್ರಗತಿಯಲ್ಲಿರುವ ಯೋಜನೆಗಳು:

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ. | ಜಿಲ್ಲೆ | ಕೆರೆ ತುಂಬಿಸುವ ಯೋಜನೆಗಳ ಸಂಖ್ಯೆ | ತುಂಬಿಸಲು ಪ್ರಸ್ತಾಪಿಸಿರುವ ಕೆರೆಗಳ ಸಂಖ್ಯೆ. | | ಒಟ್ಟು ಕೆರೆಗಳ ಸಂಖ್ಯೆ | ಅಂದಾಜು ಮೊತ್ತ |
|---|---|---|---|---|---|---|
| | | | ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಸಂಖ್ಯೆ | ಇತರೆ ಇಲಾಖೆಯ ಕೆರೆಗಳ ಸಂಖ್ಯೆ | | |
| 1 | ಬೆಳಗಾವಿ | 3 | 17 | 11 | 28 | 18701.00 |
| 2 | ಗದಗ | 1 | 1 | 0 | 1 | 1400.00 |
| 3 | ಹಾವೇರಿ | 2 | 31 | 123 | 154 | 32500.00 |
| 4 | ಬಾಗಲಕೋಟೆ | 2 | 3 | 0 | 3 | 6100.00 |
| | **ಒಟ್ಟು** | **8** | **52** | **134** | **186** | **58701.00** |
| 1 | ಕಲಬುರಗಿ | 3 | 12 | 6 | 18 | 34371.00 |
| 2 | ಕೊಪ್ಪಳ | 3 | 26 | 6 | 32 | 87866.00 |
| 3 | ರಾಯಚೂರು | 3 | 18 | 19 | 37 | 58918.00 |
| | **ಒಟ್ಟು** | **9** | **56** | **31** | **87** | **181155.00** |

**3. ಕೇಂದ್ರ ಪುರಸ್ಕೃತ ಯೋಜನೆಗಳು:**

- ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಕಲಬುರಗಿ, ಯಾದಗಿರಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಮೇಲ್ಮೈಜಲ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ಅಟಲ್ ಭೂಜಲ ಯೋಜನೆಯಡಿ ಅಂತರ್ಜಲ ಅತೀ ಬಳಕೆ ತಾಲ್ಲೂಕುಗಳೆಂದು ಗುರುತಿಸಲಾಗಿರುವ ಬೆಳಗಾವಿ ಜಿಲ್ಲೆಯ ರಾಮದುರ್ಗ, ಅಥಣಿ, ಕಾಗವಾಡ ತಾಲ್ಲೂಕುಗಳಲ್ಲಿ, ಗದಗ ಜಿಲ್ಲೆಯ ಗದಗ ಮತ್ತು ರೋಣ ತಾಲ್ಲೂಕುಗಳಲ್ಲಿ, ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ಮತ್ತು ಬಾದಾಮಿ ತಾಲ್ಲೂಕುಗಳಲ್ಲಿ ಮತ್ತು ವಿಜಯನಗರ ಜಿಲ್ಲೆಯ ಹೆಚ್.ಬಿ.ಹಳ್ಳಿ ಮತ್ತು ಹರಪನಹಳ್ಳಿ ತಾಲ್ಲೂಕುಗಳಲ್ಲಿ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

**4. ಸರಣಿ ಚೆಕ್ ಡ್ಯಾಂಗಳ ನಿರ್ಮಾಣ:**

ಪ್ರಸ್ತುತ ವರ್ಷ, ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಅಂತರ್ಜಲ ಅಭಿವೃದ್ಧಿಗಾಗಿ, ರೂ.200.00 ಕೋಟಿ ಅನುದಾನದಲ್ಲಿ ಮಹಾರಾಷ್ಟ್ರದ ಶಿರಪುರ ಮಾದರಿಯ ಸರಣಿ ಚೆಕ್ ಡ್ಯಾಂಗಳ ನಿರ್ಮಾಣಕ್ಕಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ರೂ.100.00 ಕೋಟಿ ಅನುದಾನವನ್ನು ಹಾಗೂ ಸಣ್ಣ ನೀರಾವರಿ ಇಲಾಖೆಯಿಂದ ರೂ.100.00 ಕೋಟಿ ಅನುದಾನವನ್ನು ಒದಗಿಸಲಾಗಿದೆ.

**ಸಣ್ಣ ನೀರಾವರಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಮೇಲ್ಕಂಡ ಯೋಜನೆಗಳಿಂದ ಅಂತರ್ಜಲ ಮಟ್ಟ ವೃದ್ಧಿಯಾಗಿ ಕೃಷಿಗೆ ಹಾಗೂ ಕುಡಿಯುವ ನೀರಿಗೆ** ಸಹಕಾರಿಯಾಗುವುದು.

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ

ಜಸಂಇ 186 ಎಂಎಲ್ಎ 2025